ಹೇಳಿದಳು: 'ಕಾಫಿಗೆ ಕರೆದದ್ದು ನಾನು.'

ಅತಿಥಿ ಚರ್ಚಿಸಲಿಲ್ಲ. 'ಥ್ಯಾಂಕ್ಸ್' ಎಂದ. ಅವನು ಯೋಚಿಸಿದ : ನಾನೇ ಹಣ ಕೊಡುತ್ತೇನೆ ಎಂದು ಜಿದ್ ಮಾಡಿದರೆ ಮುತ್ತಿನ ಹಾರ ಬೀದಿಯಲ್ಲಿ ಹರಿದುಬಿದ್ದ ಎಲ್ಲ ಮುತ್ತುಗಳು ಚಲ್ಲಾಪಿಲ್ಲಿಯಾದಂತಾಗುತ್ತವೆ...

ಟ್ಯಾಕ್ಸಿ ಮಾಡಿಕೊಂಡು ಹೊರಟರು. ಮನೆಬಂತು ಇಳಿಯುತ್ತ ಇಳಿಯುತ್ತ ಹಣಕೊಡಲು ಆಕೆ ಮುಂದಾದಾಗ ಅವನು ತಡೆದ. 'ಇರಲಿಬಿಡಿ' ಎಂದ.

'ಯಾಕೆ?' ಆಕೆಯ ಹಣೆಯ ಮೇಲೆ ಗೆರೆಗಳು ಮೂಡಿದವು.

'ಇಂದಿನ ದಿವಸ ನನಗೆ ಅತ್ಯಂತ ಅಮೂಲ್ಯವಾದದ್ದು.'

'ಹೇಗೆ?'

'ನಾನು ಇದಕ್ಕೂ ಮೊದಲು ಯಾರೂ ಹಸಿರು ಬಿಂದಿ ಇಟ್ಟುಕೊಂಡದ್ದನ್ನು ಕಂಡಿಲ್ಲ...' ಆತ ಸ್ನಿಗ್ಧ ಸ್ವರದಲ್ಲಿ ಹೇಳಿದ.

ಆಕೆ ಕೊಂಚ ವಿಚಲಿತಳಾದಳು ಅಷ್ಟರಲ್ಲಿ ಟ್ಯಾಕ್ಸಿ ಮುಂದೆ ಸಾಗಿಹೋಗುತ್ತಿತ್ತು... ಸ್ವಲ್ಪದೂರ ಹೋದಮೇಲೆ ಅದು ಕಣ್ಣಿಂದ ಮರೆಯಾಯಿತು.

## ಮೃದುಲಾ ಗರ್ಗ್

ಕೋಲ್ಕತ್ತದವರಾದ ಮೃದುಲಾ ಗರ್ಗ್ ಪ್ರಸ್ತುತ ನವದೆಹಲಿಯಲ್ಲಿ ವಾಸವಾಗಿದ್ದಾರೆ. ನವದೆಹಲಿಯ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿರುವ ಅವರು ಕೆಲಕಾಲದ ಅಧ್ಯಾಪನದ ಬಳಿಕ 1970 ರಿಂದ ನಿರಂತರ ಬರವಣಿಗೆಯಲ್ಲಿ ತೊಡಗಿಕೊಂಡಿದ್ದಾರೆ.

'ಉಸಕೆ ಹಿಸ್ಸೇಕೀ ಧೂಪ', 'ವಂಶಜ', 'ಚಿತ್ತಕೋಬರಾ', 'ಅನಿತ್ಯ', 'ಮೈಂ ಔರ ಮೈಂ', 'ಕಠಗುಲಾಬ್', 'ಮಿಲ್ಜುಲ್ಮನ್' ಅವರ ಕಾದಂಬರಿಗಳು. 'ಕಿತನೀ ಕೈದೆಂ', 'ಟುಕಡಾ', 'ಉರ್ಫಸೈಮ್' ಅವರ ಕಥಾ ಸಂಗ್ರಹಗಳಾಗಿವೆ. 11 ಕಥಾ ಸಂಕಲನಗಳಲ್ಲಿ ಎಂಬತ್ತಕ್ಕೂ ಹೆಚ್ಚು ಕತೆಗಳಿವೆ. 'ಏಕ್ ಔರ್ ಅಜನಬೀ', 'ಜಾದೂಕಾ ಕಾಲೀನ್', 'ತೀನ್ ಕೈದೆಂ', 'ಸಾಮ ದಾಮ ದಂಡ ಭೇದ' ಅವರ ನಾಟಕಗಳು.

ವನರಾಗ ಶರ್ಮಾ ಎಂಬ ಹೆಸರಿನಲ್ಲಿ ಬರೆಯುವ ಗಣಪತಿ ರಾಮಚಂದ್ರ ಭಟ್ ಯಲ್ಲಾಪುರದ ವಜ್ರಳ್ಳಿಯವರು. ಅದೇ ಊರಿನ ಪ್ರೌಢಶಾಲೆಯಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಶಿಕ್ಷಕರಾಗಿ ಕೆಲಸ ಮಾಡಿ ಈಗ ನಿವೃತ್ತರಾಗಿದ್ದಾರೆ. ವನರಾಗ ಶರ್ಮ 20ಕ್ಕೂ ಹೆಚ್ಚು ಪುಸ್ತಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಕವಿತೆ, ಕತೆ, ಅನುವಾದಿತ ಬರಹಗಳು ಸೇರಿವೆ. ಮಕ್ಕಳ ಸಾಹಿತ್ಯದಲ್ಲೂ ಅವರು ಕೆಲಸ ಮಾಡಿದ್ದಾರೆ.